(ಸರ್ವೋಚ್ಚ ನ್ಯಾಯಾಲಯ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಕೆ. ಸಿಕ್ರಿ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್

ಶ್ರೀ ನರೇಂದ್ರ ಕುಮಾರ್ ಶ್ರೀವಾಸ್ತವ-ವಿರುದ್ಧ ಬಿಹಾರ ಸರ್ಕಾರ ಹಾಗೂ ಇತರರು

ಕ್ರಿಮಿನಲ್ ಅಪೀಲು ಸಂಖ್ಯೆ: 211/2019, ದಿನಾಂಕ 4 ನೇ ಫೆಬ್ರುವರಿ, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್. ಅಬ್ದುಲ್ ನಜೀರ್:

1. ನಾವು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿರುತ್ತೇವೆ.

2. ಕ್ರಿಮಿನಲ್ ಪುನರವಲೋಕನ ಸಂಖ್ಯೆ: 2017 ರ 111 ರಲ್ಲಿ ದಿನಾಂಕ: 30.03.2017 ರ ತೀರ್ಪು ಹಾಗೂ ಆದೇಶದ ಮೂಲಕ, ಪಾಟ್ನಾದ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಡಿಯಲ್ಲಿ 2 ರಿಂದ 4 ರವರೆಗಿನ ಪ್ರತ್ಯರ್ಜಿದಾರರು ಸಲ್ಲಿಸಿರುವ ಪುನರವಲೋಕನ ಅರ್ಜಿಯನ್ನು ಸದರಿ ನ್ಯಾಯಾಲಯವು ಅಂಗೀಕರಿಸಿ, ಅಪೀಲುದಾರರು ಸಲ್ಲಿಸಿದ್ದ ಖಾಸಗಿ ದೂರಿನ ಆಧಾರದ ಮೇಲೆ ಭಾರತ ದಂಡ ಸಂಹಿತೆ, 1860 (ಸಂಕ್ಷಿಪ್ತವಾಗಿ ' ಐಪಿಸಿ ' ಎಂದು ಕರೆಯಲಾಗಿದೆ) ರ 193 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಂಡು ಮಾನ್ಯ ಸಹಾಯಕ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್-VII, ಮೋತಿಹಾರಿಯವರು ಹೊರಡಿಸಿದ ದಿನಾಂಕ: 22.12.2016 ರಂದಿನ ಆದೇಶವನ್ನು ರದ್ದುಪಡಿಸಿದ್ದು, ಅವುಗಳ ವಿರುದ್ಧ ಈ ಅಪೀಲನ್ನು ನಿರ್ದೇಶಿಸಲಾಗಿರುತ್ತದೆ.

3. ಪ್ರತ್ಯರ್ಜಿದಾರ ಸಂಖ್ಯೆ: 2 ರಿಂದ 4 ರವರುಗಳು ದೂರದರ್ಶನದ ಹಾಗೂ ಆಲ್ ಇಂಡಿಯಾ ರೇಡಿಯೋ ಇಲ್ಲಿನ ನೌಕರರಾಗಿರುತ್ತಾರೆ. ಅಪೀಲುದಾರರು 1,400/-ರೂ.ಗಳಿಂದ 2,600/-ರೂ.ಗಳ ವೇತನ ಶ್ರೇಣಿಯಲ್ಲಿ ಇಂಜಿನಿಯರಿಂಗ್ ಸಹಾಯಕನಂತೆ ಮೋತಿಹಾರಿ ದೂರದರ್ಶನ ಕೇಂದ್ರದಲ್ಲಿ ಕೆಲಸಕ್ಕೆ ಸೇರಿಕೊಂಡಿರುತ್ತಾರೆ. ಇಂಜಿನಿಯರಿಂಗ್ ಸಹಾಯಕರುಗಳ ವೇತನ ಶ್ರೇಣಿಯನ್ನು ದಿನಾಂಕ: 15.05.1995 ರ ತನ್ನ ನಿರ್ಧಾರದ ಮೂಲಕ ಮಾಹಿತಿ ಮತ್ತು ಪ್ರಚಾರ ಮಂತ್ರಾಲಯವು ದಿನಾಂಕ: 01.01.1986 ರಿಂದ ಜಾರಿಗೆ ಬರುವಂತೆ 2,000/-ರೂ.ಗಳಿಂದ 3,000/-ರೂ.ಗಳಿಗೆ ಪರಿಷ್ಕರಿಸಲಾಗಿರುತ್ತದೆ. ಹಿರಿಯ ಇಂಜಿನಿಯರಿಂಗ್ ಸಹಾಯಕರ ವೇತನ ಶ್ರೇಣಿಯನ್ನು ದಿನಾಂಕ: 01.01.1986 ರಿಂದ ಜಾರಿಗೆ ಬರುವಂತೆ 2,000/-ರೂ.ಗಳಿಂದ 3275/ರೂ.ಗಳವರೆಗೆ ಪರಿಷ್ಕರಿಸಲಾಗಿರುತ್ತದೆ. ದಿನಾಂಕ: 01.01.1996 ರಿಂದ ಜಾರಿಗೆ ಬರುವಂತೆ, ಎಲ್ಲಾ ಪ್ರವರ್ಗಗಳ ಬದಲಾವಣೆಗೊಂಡ ವೇತನ ಶ್ರೇಣಿಯನ್ನು 6500/-ರೂ.ಗಳಿಂದ 10,500/-ರೂ.ಗಳವರೆಗೆ ನಿಗದಿ ಮಾಡಲಾಗಿರುತ್ತದೆಂಬುದು ಇವರ ವಾದವಾಗಿರುತ್ತದೆ. ಭರವಸೆದಾಯಕ ವೃತ್ತಿ ಪ್ರಗತಿ (ಎಸಿಪಿ) ಯೋಜನೆಗಳಿಂದ ಜಾರಿಗೆ ಬರುವಂತೆ ಸಂಬಂಧಪಟ್ಟ ವೃಂದದ ಉದ್ಯೋಗಿಗಳ ಸಂಘವು, ಪಾಟ್ನಾ ಪೀಠದ (ಸಂಕ್ಷಿಪ್ತವಾಗಿ ಸಿಎಟಿ ಎಂದು ಕರೆಯಲಾಗಿರುತ್ತದೆ) ಕೇಂದ್ರ ಆಡಳಿತಾತ್ಮಕ ನ್ಯಾಯಾಧೀಕರಣದ ಎದುರು ಅರ್ಜಿಯನ್ನು ಸಲ್ಲಿಸುವುದಕ್ಕೆ ಕಾರಣವಾಗಿರುವಂಥ, ಆದರೆ ಈವರೆಗೂ ಅಂಗೀಕರಿಸದಂಥ 8,000/-ರೂ.ಗಳಿಂದ 13,500/-ರೂ.ಗಳ ವೇತನ ಶ್ರೇಣಿಯಲ್ಲಿ 1 ನೇ ಭರವಸೆದಾಯಕ ವೃತ್ತಿ ಪ್ರಗತಿ ಯೋಜನೆಯ ಮಂಜೂರಾತಿಗೆ ಸಂಬಂಧಿಸಿದಂತೆ ಮನವಿ ಸಲ್ಲಿಸಿರುತ್ತದೆ. ಇದು ಮೂಲ ಅಪೀಲು ಸಂಖ್ಯೆ: 2002 ರ 514 ರ ಉದ್ಭವಕ್ಕೆ ಕಾರಣವಾಗಿರುತ್ತದೆ. ಸದರಿ ಮೂಲ ಅಪೀಲನ್ನು ದಿನಾಂಕ: 07.03.2009 ರ ಆದೇಶದ ಮೂಲಕ ಕೇಂದ್ರ ಆಡಳಿತಾತ್ಮಕ ನ್ಯಾಯಾಧೀಕರಣವು ಅಂಗೀಕರಿಸಿರುತ್ತದೆ.

4. ಕೇಂದ್ರ ಸರ್ಕಾರವು ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ಚ ಸದರಿ ಆದೇಶವನ್ನು ಪ್ರಶ್ನಿಸಿರುತ್ತದೆ. ಉಚ್ಚ ನ್ಯಾಯಾಲಯವು ರಿಟ್ ಆದೇಶವನ್ನು ಯಾವುದೇ ಸಾಮಾನ್ಯ ನಿರ್ದೇಶನವನ್ನು ಎ.ಸಿ.ಪಿ.ಯ

ಅನುದಾನಕ್ಕೆ ಸಂಬಂಧಿಸಿದಂತೆ ನೀಡುವಂತಿಲ್ಲವೆಂದೂ, ಎ.ಸಿ.ಪಿ.ಯನ್ನು ಪ್ರತ್ಯೇಕವಾಗಿ ನೀಡಬೇಕಾಗಿರುತ್ತದೆಂಬ ಅಭಿಪ್ರಾಯದೊಂದಿಗೆ ಅಂಗೀಕರಿಸಿರುತ್ತದೆ. ಆ ತರುವಾಯ ಅಪೀಲುದಾರರು 1 ನೇ ಎ.ಸಿ.ಪಿ.ಯ ಅನುದಾನಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದ ಮುಂದೆ ನಿವೇದನೆ ಸಲ್ಲಿಸಿರುತ್ತಾರೆ. ಅದನ್ನು ನಿರಾಕರಿಸಿದಾಗ, ಈತ, ದಿನಾಂಕ: 13.02.2013 ರಂದು ವಜಾಗೊಂಡಂಥ ಅಪೀಲನ್ನು, ಕೇಂದ್ರ ಆಡಳಿತಾತ್ಮಕ ನ್ಯಾಯಾಧಿಕರಣದ ಎದುರಿನ ಮೂಲ ಅಪೀಲು ಸಂಖ್ಯೆ: 2009 ರ 173 ನ್ನು ಸಲ್ಲಿಸಿರುತ್ತಾನೆ. ಆ ನಂತರ ಅಪೀಲುದಾರರು, ಸಲ್ಲಿಸಿದ ನಿವೇದನೆ ಮೇಲೆ ಸೂಕ್ತ ಆದೇಶವನ್ನು ಹೊರಡಿಸಲು ಅದರಲ್ಲಿ ಪ್ರತ್ಯರ್ಜಿದಾರರಿಗೆ ನೀಡಿರುವ ನಿರ್ದೇಶನಗಳೊಂದಿಗೆ ದಿನಾಂಕ: 29.06.2014 ರ ಆದೇಶದ ಮೂಲಕ ವಿಲೆಯಾದಂಥ 2014 ರ ರಿಟ್ ಅರ್ಜಿ ಸಿಡಬ್ಲ್ಯೂಜೆಸಿ ಸಂಖ್ಯೆ: 2014 ರ 2797 ನ್ನು ಸಲ್ಲಿಸುವ ಮೂಲಕ ಅಪೀಲುದಾರನು ಉಚ್ಚ ನ್ಯಾಯಾಲಯಕ್ಕೆ ಎಡತಾಕಿರುತ್ತಾನೆ. ಸದರಿ ಆದೇಶದ ಅನನುಪಾಲನೆಯನ್ನು ಆಪಾದಿಸಿ, ಅಪೀಲುದಾರನು ಉಚ್ಚ ನ್ಯಾಯಾಲಯದ ಎದುರು ನಿಂದನಾ ಅರ್ಜಿಯನ್ನು ಸಲ್ಲಿಸಿದ್ದು, ಅದು ಎಂಜೆಸಿ ಸಂಖ್ಯೆ: 2015 ರ 2912 ಆಗಿರುತ್ತದೆ.

5. ನಿಂದನೆಯನ್ನು ಆಪಾದಿಸಿದ ಅರ್ಜಿಯಲ್ಲಿ, ನಿಂದನಾ ಪ್ರಕರಣದಲ್ಲಿನ ಪ್ರತ್ಯರ್ಜಿದಾರರು, ದಿನಾಂಕ: 29.06.2014 ನೇ ಆದೇಶದ ಅನುಪಾಲನೆಯನ್ನು ಸ್ಪಷ್ಟಪಡಿಸುವಂಥ ಕಾರಣವನ್ನು ತೋರಿಸಿ ಅರ್ಜಿಯನ್ನು ಸಲ್ಲಿಸಿದ್ದು, ತದನುಸಾರವಾಗಿ ನಿಂದನಾ ಪ್ರಕರಣವನ್ನು ಸೂಕ್ತ ವೇದಿಕೆಯ ಮುಂದೆ ನ್ಯಾಯಾಲಯದ ನಿರ್ದೇಶನಗಳನ್ನು ಅನುಸರಿಸಿ ಹೊರಡಿಸಿದ ಆದೇಶವನ್ನು ಪ್ರಶ್ನಿಸುವುದು ಅಪೀಲುದಾರರಿಗೆ ಬಿಟ್ಟ ವಿಷಯವಾಗಿರುತ್ತದೆಯೆಂಬ ಸ್ವಾತಂತ್ರದೊಂದಿಗೆ ಮೊಕದ್ದಮೆಯನ್ನು ಕೈಬಿಡಲಾಗುತ್ತದೆ. ಸದರಿ ಆದೇಶವನ್ನು ಪ್ರಶ್ನಿಸುವುದಕ್ಕೆ ಬದಲಾಗಿ, ಪ್ರತ್ಯರ್ಜಿದಾರರು ತಮ್ಮ ಕಾರಣ ತೋರಿಸುವ ಅಫಿಡಾವಿಟ್ಟಿನಲ್ಲಿ ಅವರುಗಳು ಸುಳ್ಳು ಮತ್ತು ಸತ್ಯವನ್ನು ಮರೆಮಾಚುವ ಹೇಳಿಕೆಗಳನ್ನು ನೀಡಿದುದರಿಂದ ಉಚ್ಚ ನ್ಯಾಯಾಲಯವು ನಿಂದನಾ ಪ್ರಕರಣವನ್ನು ನಿರಸಿತಗೊಳಿಸಿರುತ್ತದೆಂದು ಆಪಾದಿಸಿ, ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 193 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧ ಎಸಗಿರುವನೆಂದು ಆಪಾದಿಸಿ, ಮೋತಿಹಾರಿಯ ಸಹಾಯಕ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್-VII ರವರ ಮುಂದೆ ಅಪೀಲುದಾರರು 2 ರಿಂದ 4 ನೇ ಪ್ರತ್ಯರ್ಜಿದಾರರಿಗೆ ವಿರುದ್ಧವಾಗಿ ಖಾಸಗಿ ದೂರನ್ನು ಸಲ್ಲಿಸಿರುತ್ತಾನೆ. ಮ್ಯಾಜಿಸ್ಟ್ರೇಟ್‌ರವರು, ದಿನಾಂಕ: 22-12.2016ರ ಆದೇಶದ ಮೂಲಕ, ಸದರಿ ವಿಷಯಕ್ಕೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತಾರೆ ಮತ್ತು 2 ನೇ ಮತ್ತು 4 ನೇ ಪ್ರತ್ಯರ್ಜಿದಾರರಿಗೆ ಸಮನುಗಳನ್ನು ಹೊರಡಿಸಿರುತ್ತಾರೆ.

6. ಪ್ರತ್ಯರ್ಜಿದಾರ ಸಂಖ್ಯೆ: 2 ರಿಂದ 4 ರವರುಗಳು ಉಚ್ಚ ನ್ಯಾಯಾಲಯದ ಚ ಎದುರು ಮ್ಯಾಜಿಸ್ಟ್ರೇಟರ ಸದರಿ ಆದೇಶವನ್ನು ಪ್ರಶ್ನಿಸಿರುತ್ತಾರೆ. ಮೇಲೆ ಗಮನಿಸಲಾದಂತೆ, ಉಚ್ಚ ನ್ಯಾಯಾಲಯವು ದಿನಾಂಕ: 30.03.2017 ರ ತನ್ನ ಆದೇಶದ ಮೂಲಕ ಕ್ರಿಮಿನಲ್ ಪುನರವಲೋಕನ ಅರ್ಜಿಯನ್ನು ಅಂಗೀಕರಿಸಿರುತ್ತದೆ.

7. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ಅಪೀಲುದಾರರು ಸಲ್ಲಿಸಿದ ನಿಂದನಾ ಅರ್ಜಿಯಲ್ಲಿ ಪ್ರತ್ಯರ್ಜಿದಾರರು, ನ್ಯಾಯಾಲಯದ ಹೊರಗೆ ಸಿದ್ಧಪಡಿಸಿದ ನಕಲು ರೂಪದಲ್ಲಿ ಸೃಷ್ಟಿಸಿದ ಸುಳ್ಳು ಅಫಿಡಾವಿಟ್ಟುಗಳನ್ನು ಸಲ್ಲಿಸಿರುತ್ತಾರೆಂದು ನಿವೇದಿಸಿದ್ದಾರೆ. ಸುಳ್ಳು ಅಫಿಡಾವಿಟ್ಟುಗಳ ಆಧಾರದ ಮೇಲೆ, ಉಚ್ಚ ನ್ಯಾಯಾಲಯ ನಿಂದನಾ ಪ್ರಕರಣವನ್ನು ಬಿಟ್ಟುಬಿಟ್ಟಿರುತ್ತದೆ. ಆದ್ದರಿಂದ, ಅಪೀಲುದಾರರು, 2 ರಿಂದ 4 ರವರೆಗಿನ ಪ್ರತ್ಯರ್ಜಿದಾರರ ವಿರುದ್ಧ ಭಾರತ ದಂಡ ಸಂಹಿತೆಯ 193 ನೇ ಪ್ರಕರಣದ ಅಡಿಯಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ದೂರನ್ನು ಸಲ್ಲಿಸಿರುತ್ತಾರೆ. ಭಾರತ ದಂಡ ಸಂಹಿತೆಯ 193 ನೇ ಪ್ರಕರಣದ ಅಡಿಯಲ್ಲಿ ಖಾಸಗಿ ದೂರನ್ನು ಸಲ್ಲಿಸಿರುವುದಕ್ಕೆ ಸ ಂ ಬ ಂ ಧಿಸಿದ ಂ ತೆ ಪೂರ್ವಾನುಮೋದನೆ ಪಡೆದುಕೊಳ್ಳುವುದು ಆಜ್ಞಾಪಕವಾಗಿರುವುದಿಲ್ಲವೆಂದೂ ವಾದಿಸಲಾಗಿರುತ್ತದೆ. ಈ ಸಂಬಂಧದಲ್ಲಿ, ಈತ ಸಚ್ಚಿದಾನಂದ ಸಿಂಗ್ ಮತ್ತು ಮತ್ತೊಬ್ಬರು ವಿರುದ್ಧ ಬಿಹಾರ ಸರ್ಕಾರ ಹಾಗೂ ಮತ್ತೊಬ್ಬರು (1998) 2 ಎಸ್‌ಸಿಸಿ 493 ಪ್ರಕರಣದಲ್ಲಿ ಈ ನ್ಯಾಯಾಲಯವು ನೀಡಿದ ತೀರ್ಪನ್ನು ಉದಾಹರಿಸಿರುತ್ತಾರೆ.

8. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಪ್ರತ್ಯರ್ಜಿದಾರರ ಪರ ಹಾಜರಾಗುವ ಮಾನ್ಯ ನ್ಯಾಯವಾದಿಗಳು, ನ್ಯಾಯಿಕ ಪ್ರಕ್ರಿಯೆಯಲ್ಲಿ ಸುಳ್ಳು ಸಾಕ್ಷ್ಯವನ್ನು ನೀಡುವ ಅಪರಾಧಕ್ಕಾಗಿನ ದಂಡನೆಯು ಭಾರತ ದಂಡ ಸಂಹಿತೆಯ 193 ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿದ್ದು, ಅಂಥ ಅಪರಾಧವನ್ನು ಸಂಜ್ಞೇಯತೆಗೆ ತೆಗೆದುಕೊಳ್ಳುವುದನ್ನು ನಿರ್ವಹಿಸುವ ಕಾನೂನು ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದಲ್ಲಿ ಒಳಗೊಂಡಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣವು ಅಪರಾಧವನ್ನು ಎಸಗಲಾಗಿದೆಯೆಂದು ಆಪಾದಿಸಿರುವಂಥ ನ್ಯಾಯಾಲಯದ ನ್ಯಾಯಿಕ ನಡಾವಳಿಗೆ ಸಂಬಂಧಿಸಿದಂತೆ, ಈ ಸಂಬಂಧದಲ್ಲಿ ನ್ಯಾಯಾಲಯವು ಲಿಖಿತದಲ್ಲಿ ಅಧಿಕೃತಗೊಳಿಸುವಂಥ ನ್ಯಾಯಾಲಯದ ಅಥವಾ ನ್ಯಾಯಾಲಯದ ಅಂಥ ಅಧಿಕಾರಿಗಳಲ್ಲಿ ಫಿರ್ಯಾದು ಇರದ ಹೊರತು ಭಾರತ ದಂಡ ಸಂಹಿತೆಯ 193 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧದ ನ್ಯಾಯಾಲಯವು ಸಂಜ್ಞೇಯಕ್ಕೆ ತೆಗೆದುಕೊಳ್ಳುವುದನ್ನು ಸ್ಪಷ್ಟವಾಗಿ ನಿಷೇಧಿಸುತ್ತದೆ. ಅಂಥ ಯಾವುದೇ ಫಿರ್ಯಾದನ್ನು ಸಲ್ಲಿಸಿರುವುದರಿಂದ, ಉಚ್ಚ ನ್ಯಾಯಾಲಯವು, ಮ್ಯಾಜಿಸ್ಟ್ರೇಟರ ಆದೇಶವನ್ನು ರದ್ದುಪಡಿಸಿರುವುದನ್ನು ಸಮರ್ಥಿಸಿಕೊಂಡಿರುತ್ತದೆ. ಈ ಸಂಬಂಧದಲ್ಲಿ, ಎಂ.ಎಸ್. ಅಣ್ಣಾವತ್ ವಿರುದ್ಧ ಹರಿಯಾಣ ಸರ್ಕಾರ ಹಾಗೂ ಮತ್ತೊಬ್ಬರು (2000) 1 ಎಸ್‌ಸಿಸಿ 278 ಪ್ರಕರಣದಲ್ಲಿ ಈ ನ್ಯಾಯಾಲಯವು ನೀಡಿರುವ ತೀರ್ಪನ್ನು ಉದಾಹರಿಸಲಾಗಿರುತ್ತದೆ.

9. ಮಂಡಿಸಿದ ವಾದಗಳಿಗೆ ಸಂಬಂಧಿಸಿದಂತೆ, ಖಾಸಗಿ ದೂರಿನ ಆಧಾರದ ಮೇಲೆ ಭಾರತ ದಂಡ ಸಂಹಿತೆಯ 193 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಸಂಜ್ಞೇಯತೆಗೆ ತೆಗೆದುಕೊಳ್ಳುವಲ್ಲಿನ ಮ್ಯಾಜಿಸ್ಟ್ರೇಟರ ಕ್ರಮವು ಸಮರ್ಥನೀಯವೇ ಎಂಬ ಪ್ರಶ್ನೆಯನ್ನು ಪರಿಗಣಿಸಬೇಕಾಗಿರುತ್ತದೆ.

10. ಮತ್ತಷ್ಟು ಮುಂದುವರೆಯುವುದಕ್ಕೆ ಮೊದಲು, ಭಾರತ ದಂಡ ಸಂಹಿತೆ ಹಾಗೂ ದಂಡ ಪ್ರಕ್ರಿಯಾ ಸಂಹಿತೆಗಳನ್ನು ಈ ಹಂತದಲ್ಲಿ ಪರಿಶೀಲಿಸುವುದು ಆದ್ಯ ವಿಚಾರವಾಗಿದ್ದು, ಭಾರತ ದಂಡ ಸಂಹಿತೆಯ 193 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

" 193. ಸುಳ್ಳು ಸಾಕ್ಷ್ಯದ ಬಗ್ಗೆ ದಂಡನೆ:-ಯಾರೇ ವ್ಯಕ್ತಿಯು, ನ್ಯಾಯಿಕ ವ್ಯವಹರಣೆಯ ಯಾವುದೇ ಹಂತದಲ್ಲಿ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷ್ಯವನ್ನು ಕೊಟ್ಟರೆ ಅಥವಾ ನ್ಯಾಯಿಕ ವ್ಯವಹರಣೆಯ ಯಾವುದೇ ಹಂತದಲ್ಲಿ ಉಪಯೋಗಿಸಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯವನ್ನು ಸೃಷ್ಟಿಸಿದರೆ ಅವನು ಏಳು ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು;

ಮತ್ತೂ ಯಾರೇ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಯಾವುದೇ ಇತರ ಸಂದರ್ಭದಲ್ಲಿ ಸುಳ್ಳು ಸಾಕ್ಷ್ಯವನ್ನು ಕೊಟ್ಟರೆ ಅಥವಾ ಸೃಷ್ಟಿಸಿದರೆ, ಅವನು ಮೂರು ವರ್ಷಗಳ ಅವಧಿಯವರೆಗಿನ ಯಾವುದೇ ಬಗೆಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು.

ವಿವರಣೆ 1.-ಸೇನಾ ನ್ಯಾಯಾಲಯದ ಮುಂದಿನ ಆರೋಪ ವಿಚಾರಣೆಯು ಒಂದು ನ್ಯಾಯಿಕ ವ್ಯವಹರಣೆಯಾಗಿರುತ್ತದೆ.

ವಿವರಣೆ 2.-ಒಂದು ನ್ಯಾಯಾಲಯದ ಮುಂದಿನ ವ್ಯವಹರಣೆಗೆ ಪ್ರಾಸ್ತಾವಿಕವಾಗಿ ವಿಧಿಪ್ರಕಾರ ನಿರ್ದೇಶಿತವಾದ ತನಿಖೆಯು ನ್ಯಾಯಾಲಯದ ಮುಂದೆ ನಡೆಯದಿದ್ದರೂ ಅಂಥ ತನಿಖೆಯು ನ್ಯಾಯಿಕ ತನಿಖೆಯ ಒಂದು ಹಂತವಾಗಿರುತ್ತದೆ.

ದೃಷ್ಟಾಂತ

' ಝಡ್ ' ಈತನನ್ನು ಆರೋಪ ವಿಚಾರಣೆಗಾಗಿ ಒಪ್ಪಿಸಬೇಕೇ ಎಂಬುದನ್ನು ನಿಶ್ಚಯಿಸುವ ಉದ್ದೇಶದಿಂದ ಮ್ಯಾಜಿಸ್ಟ್ರೇಟಿನ ಮುಂದೆ ನಡೆಸಲಾದ ಒಂದು ವಿಚಾರಣೆಯಲ್ಲಿ ' ಎ ' ಈತನು ತಾನು ಸುಳ್ಳೆಂದು ತಿಳಿದಿರುವ

ಒಂದು ಹೇಳಿಕೆಯನ್ನು ಪ್ರಮಾಣಮಾಡಿ ಹೇಳುತ್ತಾನೆ. ಈ ವಿಚಾರಣೆಯು ನ್ಯಾಯಿಕ ವ್ಯವಹರಣೆಯ ಒ ಂ ದು ಹಂತವಾಗಿರುವುದರಿಂದ 6 ' ಎ ಎ ' ' ಈತನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುತ್ತಾನೆ.

ವಿವರಣೆ 3: ವಿಧಿಗನುಸಾರವಾಗಿ ನ್ಯಾಯಾಲಯವು ನಿರ್ದೇಶಿಸಿದ ಮತ್ತು ನ್ಯಾಯಾಲಯದ ಅಧಿಕಾರದ ಮೇರೆಗೆ ನಡೆಸಲಾದ ಒಂದು ತನಿಖೆಯು ಆ ನ್ಯಾಯಾಲಯದ ಮುಂದೆ ನಡೆಯದಿದ್ದರೂ, ಅಂಥ ತನಿಖೆಯು ನ್ಯಾಯಿಕ ವ್ಯವಹರಣೆಯ ಒಂದು ಹಂತವಾಗಿರುತ್ತದೆ.

ದೃಷ್ಟಾಂತ

ಭೂಮಿಯ ಎಲ್ಲೆಗಳನ್ನು ಸ್ಥಳದಲ್ಲೇ ನಿರ್ಧರಿಸಲು ನ್ಯಾಯಾಲಯವು ಪ್ರತಿನಿಯೋಜಿಸಿದ ಒಬ್ಬ ಅಧಿಕಾರಿಯ ಮುಂದೆ ನಡೆದ ವಿಚಾರಣೆಯಲ್ಲಿ ' ಎ ' ಈತನು ತಾನು ಸುಳ್ಳೆಂದು ತಿಳಿದಿರುವ ಒಂದು ಹೇಳಿಕೆಯನ್ನು ಪ್ರಮಾಣ ಮಾಡಿ ನೀಡುತ್ತಾನೆ. ಈ ವಿಚಾರಣೆಯು ನ್ಯಾಯಿಕ ವ್ಯವಹರಣೆಯ ಒಂದು ಹಂತವಾಗಿರುವುದರಿಂದ ' ಎ ' ಈತನು ಸುಳ್ಳು ಸಾಕ್ಷ್ಯವನ್ನು ಕೊಟ್ಟಿರುತ್ತಾನೆ. ”

11. ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣವು ಈ ಮುಂದಿನಂತಿರುತ್ತದೆ:

“ 195. ಲೋಕ ನೌಕರರ ವಿಧಿಬದ್ಧ ಪ್ರಾಧಿಕಾರದ ಅವಹೇಳನಕ್ಕಾಗಿ ಲೋಕನ್ಯಾಯಕ್ಕೆ ವಿರುದ್ಧವಾದ ಅಪರಾಧಗಳಿಗಾಗಿ ಮತ್ತು ಸಾಕ್ಷ್ಯವಾಗಿ ನೀಡಿದ ದಸ್ತಾವೇಜುಗಳಿಗೆ ಸಂಬಂಧಿಸಿದ ಅಪರಾಧಗಳಿಗಾಗಿ ಪ್ರಾಸಿಕ್ಯೂಷನ್-(1) ಯಾವುದೇ ನ್ಯಾಯಾಲಯವು,

(ಎ) (i) ಭಾರತ ದಂಡ ಸಂಹಿತೆಯ (1860 ರ 45) 172 ರಿಂದ 188 ರ (ಎರಡೂ ಪ್ರಕರಣಗಳು ಸೇರಿದಂತೆ) ವರೆಗಿನ ಪ್ರಕರಣಗಳ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು; ಅಥವಾ

(ii) ಅಂಥ ಅಪರಾಧವನ್ನು ದುಷ್ಪ್ರೇರಿಸುವ ಅಥವಾ ಮಾಡುವ ಪ್ರಯತ್ನವನ್ನು; ಅಥವಾ

(iii) ಸಂಬಂಧಪಟ್ಟ ಲೋಕ ನೌಕರನ ಅಥವಾ ಯಾರಿಗೆ ಅವನು ಆಡಳಿತದಲ್ಲಿ ಅಧೀನನಾಗಿರುವನೋ ಆ ಇತರ ಯಾರೇ ಲೋಕ ನೌಕರನ ಲಿಖಿತ ಫಿರ್ಯಾದಿನ ಮೇಲಲ್ಲದೆ ಅಂಥ ಅಪರಾಧವನ್ನು ಮಾಡುವ ಬಗೆಗಿನ ಯಾವುದೇ ಅಪರಾಧಿಕ ಒಳಸಂಚನ್ನು;

(ಬಿ) (i) ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಿದಾಗ, ಭಾರತ ದಂಡ ಸಂಹಿತೆಯ (1860 ರ 45) ಈ ಕೆಳಗಿನ ಯಾವುದೇ ಪ್ರಕರಣಗಳು, ಎಂದರೆ 193 ರಿಂದ 196. (ಎರಡೂ ಪ್ರಕರಣಗಳು ಸೇರಿದಂತೆ), 199, 200 (205 ರಿಂದ 211) (ಎರಡೂ ಪ್ರಕರಣಗಳು ಸೇರಿದಂತೆ), ಮತ್ತು 228 ಇವುಗಳ ಮೇರೆಗೆ ದಂಡನೀಯವಾದ ಅಪರಾಧವನ್ನು; ಅಥವಾ

(ii) ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಹಾಜರುಪಡಿಸಲಾದ ಅಥವಾ ನೀಡಲಾದ ದಸ್ತಾವೇಜಿನ ಬಗ್ಗೆ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಿದಾಗ, ಸದರಿ ಸಂಹಿತೆಯ 463 ನೇ ಪ್ರಕರಣದಲ್ಲಿ ವಿವರಿಸಲಾದ ಅಥವಾ 471, 475 ಅಥವಾ 476 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು; ಅಥವಾ

(iii) (i) ಅಥವಾ (ii) ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ಯಾವುದೇ ಅಪರಾಧವನ್ನು ಮಾಡುವ ಬಗೆಗಿನ ಯಾವುದೇ ಅಪರಾಧಿಕ ಒಳಸಂಚನ್ನು ಅಥವಾ ಮಾಡುವ ಪ್ರಯತ್ನವನ್ನು ಅಥವಾ ದುಷ್ಪ್ರೇರಣೆಯನ್ನು-

ಆ ನ್ಯಾಯಾಲಯದ ಅಥವಾ ಯಾವ ನ್ಯಾಯಾಲಯಕ್ಕೆ ಆ ನ್ಯಾಯಾಲಯವು ಅಧೀನವಾಗಿರುವುದೋ ಆ ಇತರ ನ್ಯಾಯಾಲಯದ ಲಿಖಿತ ಪಿ ದಿನ ಮೇಲಲ್ಲದೆ, ಗ ಮ ನಿಸಿ ಕ್ರಮತೆಗೆದುಕೊಳ್ಳತಕ್ಕದ್ದಲ್ಲ.

(2) (1) ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ಒಬ್ಬ ಲೋಕ ನೌಕರನು ಒಂದು ಫಿರ್ಯಾದನ್ನು ಮಾಡಿದರೆ, ಯಾರಿಗೆ ಅವನು ಆಡಳಿತದಲ್ಲಿ ಅಧೀನನಾಗಿರುವನೋ, ಆ ಯಾರೇ ಪ್ರಾಧಿ ಕಾರಿಯು ಫಿರ್ಯಾದನ್ನು ವಾಪಸು ಪಡೆಯಲು ಆದೇಶಿಸಬಹುದು ಮತ್ತು ಅಂಥ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಕಳುಹಿಸಬಹುದು ಮತ್ತು ನ್ಯಾಯಾಲಯವು ಅದನ್ನು ಸ್ವೀಕರಿಸಿದ ಅನಂತರ ಆ ಫಿರ್ಯಾದಿನ ಮೇಲೆ ಯಾವ ಮುಂದಿನ ವ್ಯವಹರಣೆಗಳೂ ನಡೆಯತಕ್ಕದ್ದಲ್ಲ:

ಪರಂತು, ಮೊದಲಿನ ನ್ಯಾಯಾಲಯದಲ್ಲಿ ಆರೋಪ ವಿಚಾರಣೆಯು ಮುಗಿದಿದ್ದರೆ, ಹಾಗೆ ವಾಪಸು ಪಡೆಯಲು ಆದೇಶಿಸತಕ್ಕದ್ದಲ್ಲ.

(3) (1) ನೇ ಉಪ-ಪ್ರಕರಣದ (ಬಿ) ಖಂಡದಲ್ಲಿ, ' ನ್ಯಾಯಾಲಯ ' ಎಂದರೆ, ಸಿವಿಲ್, ರೆವಿನ್ಯೂ ಅಥವಾ ಕ್ರಿಮಿನಲ್ ನ್ಯಾಯಾಲಯ ಮತ್ತು ಅದು ಕೇಂದ್ರ, ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೇರೆಗೆ, ಅಥವಾ ಮೂಲಕ ರಚಿತವಾದ ನ್ಯಾಯಾಧೀಕರಣವನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ಅದು ನ್ಯಾಯಾಲಯವೆಂದು ಆ ಅಧಿನಿಯಮದಿಂದ ಘೋಷಿತವಾಗಿದ್ದರೆ, ಒಳಗೊಳ್ಳುತ್ತದೆ.

(4) (1) ನೇ ಉಪ-ಪ್ರಕರಣದ (ಬಿ) ಖಂಡದ ಉದ್ದೇಶಗಳಿಗಾಗಿ, ಒಂದು ನ್ಯಾಯಾಲಯವು, ಆ ನ್ಯಾಯಾಲಯದ ಅಪೀಲೀಯ ಡಿಗ್ರಿಗಳ ಅಥವಾ ದಂಡಾದೇಶಗಳ ಬಗ್ಗೆ ಸಾಮಾನ್ಯವಾಗಿ ಅಪೀಲುಗಳು ಇರುವ ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು ಅಥವಾ ಯಾವ ನ್ಯಾಯಾಲಯದ ಡಿಗ್ರಿಗಳ ಬಗ್ಗೆ ಸಾಮಾನ್ಯವಾಗಿ ಯಾವುದೇ ಅಪೀಲು ಇರುವುದಿಲ್ಲವೋ ಆ ಸಿವಿಲ್ ನ್ಯಾಯಾಲಯದ ಸಂದರ್ಭದಲ್ಲಿ, ಅಂಥ ಸಿವಿಲ್ ನ್ಯಾಯಾಲಯವು ಯಾವ ನ್ಯಾಯಾಲಯದ ಸ್ಥಳೀಯ ಅಧಿಕಾರ ವ್ಯಾಪ್ತಿಯೊಳಗೆ ಇರುವುದೋ ಆ ಸಾಮಾನ್ಯ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಪ್ರಧಾನ ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು:

ಪರಂತು

(ಎ) ಒಂದಕ್ಕಿಂತ ಹೆಚ್ಚು ನ್ಯಾಯಾಲಯಗಳಿಗೆ ಅಪೀಲು ಮಾಡಲು ಅವಕಾಶ ಇರುವಲ್ಲಿ, ಕಡಿಮೆ ಅಧಿಕಾರ ವ್ಯಾಪ್ತಿಯುಳ್ಳ ಅಪೀಲು ನ್ಯಾಯಾಲಯಕ್ಕೆ ಅಂಥ ನ್ಯಾಯಾಲಯವು ಅಧೀನವಾಗಿರುವುದೆಂದು ಭಾವಿಸತಕ್ಕದ್ದು:

(ಬಿ) ಸಿವಿಲ್ ಮತ್ತು ರೆವಿನ್ಯೂ ನ್ಯಾಯಾಲಯಕ್ಕೂ ಅಪೀಲು D ಮಾಡಿಕೊಳ್ಳುವ ಅವಕಾಶ ಇರುವಲ್ಲಿ, ಯಾವುದರ ಸಂದರ್ಭದಲ್ಲಿ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿತವಾಗಿದೆಯೋ ಆ ಮೊಕದ್ದಮೆಯ ಅಥವಾ ವ್ಯವಹರಣೆಯ ಸ್ವರೂಪಕ್ಕೆ ಅನುಸಾರವಾಗಿ ಅಂಥ ನ್ಯಾಯಾಲಯವು ಸಿವಿಲ್ ಅಥವಾ ರೆವಿನ್ಯೂ ನ್ಯಾಯಾಲಯಕ್ಕೆ ಅಧೀನವಾಗಿರುವುದೆಂದು ಭಾವಿಸತಕ್ಕದ್ದು.

12. ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ (1) (ಬಿ) ಉಪ ಪ್ರಕರಣದಿಂದ, ಪ್ರಕರಣವು ಎರಡು ಪ್ರತ್ಯೇಕ ಅಪರಾಧಗಳೊಂದಿಗೆ ವ್ಯವಹರಿಸಿರುವುದೆಂಬುದು ಸ್ಪಷ್ಟವಾಗಿರುತ್ತದೆ:

(1) ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಿದಾಗ, ಭಾರತ ದಂಡ ಸಂಹಿತೆಯ (1860 ರ 45) ಈ ಕೆಳಗಿನ ಯಾವುದೇ ಪ್ರಕರಣಗಳು, ಎಂದರೆ 193 ರಿಂದ 196. (ಎರಡೂ ಪ್ರಕರಣಗಳು ಸೇರಿದಂತೆ), 199, 200 (205 ರಿಂದ 211) (ಎರಡೂ ಪ್ರಕರಣಗಳು ಸೇರಿದಂತೆ), ಮತ್ತು 228 ಇವುಗಳ ಮೇರೆಗೆ ದಂಡನೀಯವಾದ ಅಪರಾಧವನ್ನು ಅಥವಾ [ಪ್ರಕರಣ 195 (1) (ಬಿ) (i)]

(ii) ಯಾವುದೇ ನ್ಯಾಯಾಲಯದಲ್ಲಿನ ಯಾವುದೇ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಹಾಜರುಪಡಿಸಲಾದ ಅಥವಾ ನೀಡಲಾದ ದಸ್ತಾವೇಜಿನ ಬಗ್ಗೆ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಆರೋಪಿಸಿದಾಗ, ಸದರಿ

ಸಂಹಿತೆಯ 463 ನೇ ಪ್ರಕರಣದಲ್ಲಿ ವಿವರಿಸಲಾದ ಅಥವಾ 471, 475 ಅಥವಾ 476 ನೇ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು; [ಪ್ರಕರಣ 195 (1) (ಬಿ) (ii)

13. ಈ ಪ್ರಕರಣಗಳ ಓದಿನಿಂದ, 195 (1) (ಬಿ) (i) ಪ್ರಕರಣದ ಅಡಿಯಲ್ಲಿನ ಹಾಗೂ 195 (1) (ಬಿ) (ii) ಪ್ರಕರಣದ ಅಡಿಯಲ್ಲಿನ ಅಪರಾಧಗಳು ಸ್ಪಷ್ಟವಾಗಿ ಭಿನ್ನವಾಗಿವೆಯೆಂಬುದನ್ನು ಸುಲಭವಾಗಿಯೇ ಕಾಣಬಹುದಾಗಿರುತ್ತದೆ. ಅಪರಾಧಗಳ ಮೊದಲ ಪ್ರವರ್ಗವು ಸುಳ್ಳು ಸಾಕ್ಷ್ಯದ ಅಪರಾಧಗಳಿಗೆ ಹಾಗೂ ಸಾರ್ವಜನಿಕ ನ್ಯಾಯದ ವಿರುದ್ಧದ ಅಪರಾಧಗಳಿಗೆ ಉಲ್ಲೇಖನೀಯವಾಗಿದ್ದು, ಇದರಿಂದ ಅಪರಾಧಗಳ ಎರಡನೇ ಪ್ರವರ್ಗವು, ಯಾವುದೇ ನ್ಯಾಯಾಲಯದಲ್ಲಿನ ಪ್ರಕ್ರಿಯೆಯಲ್ಲಿನ ಸಾಕ್ಷ್ಯದಲ್ಲಿ ಹಾಜರುಪಡಿಸಿದ ಅಥವಾ ನೀಡಲಾದ ದಸ್ತಾವೇಜುಗಳ ಸಂಬಂಧದಲ್ಲಿನ ಅಪರಾಧಗಳಿಗೆ ಸಂಬಂಧಿಸಿರುತ್ತದೆ.

14. ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣವು ನ್ಯಾಯಾಲಯವು ಅನುಸರಿಸಬೇಕಾದ ನಿಯಮವನ್ನು ವಿಧಿಸುತ್ತದೆ. ಇದು, ಅದರಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳನ್ನು ಸಂಸ್ಥೆಯಕ್ಕೆ ತೆಗೆದುಕೊಳ್ಳುತ್ತದಾದರೂ, ನಂತರದ ನ್ಯಾಯಾಲಯದಲ್ಲಿ, ಮಾಡಲಾಗಿದೆಯೆಂದು ಆಪಾದಿಸುತ್ತಿರುವ ಅಪರಾಧದ ಸಂಬಂಧದಲ್ಲಿ ಅಥವಾ ಅಲ್ಲಿನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಕ್ರಮ ಜರುಗಿಸುವುದನ್ನು ಆರಂಭಿಸಲು ಇಚ್ಛಿಸುವಂಥ ನ್ಯಾಯಾಲಯದ ಮಾರ್ಗದರ್ಶನಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನಗಳನ್ನು ಒಳಗೊಂಡಿರುವುದಿಲ್ಲ. ಆ ಉದ್ದೇಶಕ್ಕಾಗಿ ಒಂದಾದರೂ 340 ನೇ ಪ್ರಕರಣಕ್ಕೆ ಪರಿವರ್ತಿತವಾಗಬೇಕಾಗಿದ್ದು, ಇದು ಖುದ್ದಾಗಿಯಾಗಲೀ ಅಥವಾ ಆ ಸಂಬಂಧದಲ್ಲಿ ಇದಕ್ಕೆ ಸಲ್ಲಿಸಿದ ಅರ್ಜಿಯ ಮೂಲಕವಾಗಲೀ ದೂರನ್ನು ಸಲ್ಲಿಸಲು ಪ್ರಸ್ತಾವಿತ ಕಾನೂನನ್ನು ನ್ಯಾಯಾಲಯವು ಅನ್ವಯಿಸುವ ಅಪೇಕ್ಷೆಯನ್ನು ಹೊಂದಿರಬೇಕೆಂಬುದನ್ನು ಅಗತ್ಯಪಡಿಸುತ್ತದೆ.

15. ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿರುತ್ತದೆ:

" 340. 195 ನೇ ಪ್ರಕರಣದಲ್ಲಿ ಹೇಳಲಾದ ಮೊಕದ್ದಮೆಗಳಲ್ಲಿ ಪ್ರಕ್ರಿಯೆ.-(1) ತನಗೆ ಸಲ್ಲಿಸಿದ ಆವೇದನೆಯ ಮೇಲೆ ಅಥವಾ ಅನ್ಯಥಾ, ಯಾವುದೇ ನ್ಯಾಯಾಲಯವು, 195 ನೇ ಪ್ರಕರಣದ (1) ನೇ ಉಪ-ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ, ಸಂದರ್ಭಾನುಸಾರ, ಆ ನ್ಯಾಯಾಲಯದಲ್ಲಿನ ವ್ಯವಹರಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ, ಅಥವಾ ಆ ನ್ಯಾಯಾಲಯದಲ್ಲಿ ನಡೆಯುವ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಹಾಜರುಪಡಿಸಲಾದ ಅಥವಾ ನೀಡಲಾದ ದಸ್ತಾವೇಜಿನ ಬಗ್ಗೆ, ಮಾಡಲಾದುದೆಂದು ಕಂಡುಬರುವ ಯಾವುದೇ ಅಪರಾಧದ ಬಗ್ಗೆ ವಿಚಾರಣೆಯನ್ನು ಮಾಡುವುದು ನ್ಯಾಯದ ಹಿತದೃಷ್ಟಿಯಿಂದ ಯುಕ್ತವೆಂದು ಅಭಿಪ್ರಾಯಪಟ್ಟರೆ, ಅಂತಹ ನ್ಯಾಯಾಲಯವು, ತಾನು ಅವಶ್ಯವೆಂದು ಆಲೋಚಿಸುವಂತಹ ಪ್ರಾರಂಭಿಕ ವಿಚಾರಣೆ, ಯಾವುದಾದರೂ ಇದ್ದರೆ, ಅದನ್ನು ಮಾಡಿದ ಅನಂತರ,

(ಎ) ಆ ಬಗ್ಗೆ ಒ ಂ ದು ನಿರ್ಣಯವನ್ನು ಅಭಿಲೇಖಿಸಬಹುದು;

(ಬಿ) ಅದರ ಬಗ್ಗೆ ಲಿಖಿತ ಫಿರ್ಯಾದನ್ನು ಮಾಡಬಹುದು;

(ಸಿ) ಅದನ್ನು ಅಧಿಕಾರ ವ್ಯಾಪ್ತಿ ಹೊಂದಿರುವ ಮೊದಲ ವರ್ಗದ ಮ್ಯಾಜಿಸ್ಟ್ರೇಟನಿಗೆ ಕಳುಹಿಸಬಹುದು;

(ಡಿ) ಅಂತಹ ಮ್ಯಾಜಿಸ್ಟ್ರೇಟಿನ ಮುಂದೆ ಆಪಾದಿತನು ಹಾಜರಾಗುವುದಕ್ಕಾಗಿ ಸಾಕಷ್ಟು ಭದ್ರತೆಯನ್ನು ತೆಗೆದುಕೊಳ್ಳಬಹುದು ಅಥವಾ ಆಪಾದಿಸಲಾದ ಅಪರಾಧವು ಜಾಮೀನೀಯವಲ್ಲದಿದ್ದರೆ ಮತ್ತು ನ್ಯಾಯಾಲಯವು ಹಾಗೆ ಮಾಡುವುದು ಅವಶ್ಯವೆಂದು ಆಲೋಚಿಸಿದರೆ, ಆಪಾದಿತನನ್ನು ಅಭಿರಕ್ಷೆಯಲ್ಲಿ ಅಂತಹ ಮ್ಯಾಜಿಸ್ಟ್ರೇಟನ ಬಳಿಗೆ ಕಳುಹಿಸಬಹುದು; ಮತ್ತು

(ಇ) ಯಾರೇ ವ್ಯಕ್ತಿಯನ್ನು ಅಂತಹ ಮ್ಯಾಜಿಸ್ಟ್ರೇಟನ ಮುಂದೆ ಹಾಜರಾಗಲು ಮತ್ತು ಸಾಕ್ಷ್ಯವನ್ನು ನೀಡಲು ಬದ್ಧಗೊಳಿಸಬಹುದು.

(2) ಒಂದು ಅಪರಾಧದ ಸಂಬಂಧದಲ್ಲಿ (1) ನೇ ಉಪ-ಪ್ರಕರಣವು ನ್ಯಾಯಾಲಯಕ್ಕೆ ಪ್ರದಾನ ಮಾಡಿದ ಶಕ್ತಿಯನ್ನು ಆ ಅಪರಾಧದ ಸಂಬಂಧದಲ್ಲಿ (1) ನೇ ಉಪ-ಪ್ರಕರಣದ ಮೇರೆಗೆ ಆ ನ್ಯಾಯಾಲಯವು ಫಿರ್ಯಾದನ್ನು ಮಾಡದಿರುವ ಅಥವಾ ಫಿರ್ಯಾದು ಮಾಡುವುದಕ್ಕಾಗಿ ಮಾಡಿದ ಆವೇದನೆಯನ್ನು ತಿರಸ್ಕರಿಸಿದ ಯಾವುದೇ ಸಂದರ್ಭದಲ್ಲಿ, ಯಾವ ನ್ಯಾಯಾಲಯಕ್ಕೆ ಅಂತಹ ಮೊದಲಿನ ನ್ಯಾಯಾಲಯವು 195 ನೇ ಪ್ರಕರಣದ (4) ನೇ ಉಪ-ಪ್ರಕರಣದ ಅರ್ಥದ ಮಿತಿಯಲ್ಲಿ ಅಧೀನವಾಗಿದೆಯೋ ಆ ನ್ಯಾಯಾಲಯವು ಚಲಾಯಿಸಬಹುದು.

(3) ಈ ಪ್ರಕರಣದ ಮೇರೆಗೆ ಫಿರ್ಯಾದನ್ನು ಮಾಡಲಾಗಿರುವಲ್ಲಿ, ಅದಕ್ಕೆ

(ಎ) ಫಿರ್ಯಾದನ್ನು, ಮಾಡುವ ನ್ಯಾಯಾಲಯವು ಉಚ್ಚ ನ್ಯಾಯಾಲಯವಾಗಿರುವಲ್ಲಿ, ನ್ಯಾಯಾಲಯವು ನೇಮಿಸಬಹುದಾದಂತಹ ನ್ಯಾಯಾಲಯದ ಅಧಿಕಾರಿಯು;

(ಬಿ) ಇತರ ಯಾವುದೇ ಸ ಂ ದರ್ಭದಲ್ಲಿ, ನ್ಯಾಯಾಲಯದ ಪೀಠಾಸೀನಾಧಿ ಕಾರಿಯು ಸಹಿ ಮಾಡತಕ್ಕದ್ದು.

(4) ಈ ಪ್ರಕರಣದಲ್ಲಿ ನ್ಯಾಯಾಲಯ " ಎಂಬುದು 195 ನೇ ಪ್ರಕರಣದಲ್ಲಿರುವ ಅರ್ಥವನ್ನೇ ಹೊಂದಿದೆ.

16. ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣವು, ಈ ಪ್ರಕರಣದ ಅಡಿಯಲ್ಲಿ ಕ್ರಮ ಜರುಗಿಸಲು, 195 (1) (ಬಿ) ಪ್ರಕರಣದಲ್ಲಿ ಉಲ್ಲೇಖಿಸಿದ ಅಪರಾಧಗಳನ್ನು ಎಸಗಲಾಗಿದೆಯೆಂದು ಆಪಾದಿಸಿ ಯಾರ ಪ್ರಕ್ರಿಯೆಗಳನ್ನು ಆರಂಭಿಸಲಾಗಿರುತ್ತದೋ ಅಂಥ ಸಂದರ್ಭದಲ್ಲಿ ನ್ಯಾಯಾಲಯದ ಮಂಜೂರಾತಿಯನ್ನು ಪಡೆದು ಆರಂಭಿಸಬೇಕೆಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಪ್ರಕರಣದ ಉದ್ದೇಶವು ದಸ್ತಾವೇಜು ಅಥವಾ ಸಾಕ್ಷ್ಯವು ಕಾನೂನಿನ ಅಭಿರಕ್ಷೆಯಲ್ಲಿರುವಾಗ, ನ್ಯಾಯಾಲಯದಲ್ಲಿ ಸಾಕ್ಷ್ಯವಾಗಿ ಹಾಜರುಪಡಿಸಿದ ಅಥವಾ ನೀಡಲಾದ ಯಾವುದೇ ದಸ್ತಾವೇಜಿನ ಸಂಬಂಧದಲ್ಲಿ ನ್ಯಾಯನಿರ್ವಹಣೆಗೆ ಬಾಧಕವಾಗುವಂಥ ಯಾವುದೇ ಅಪರಾಧವನ್ನು ಎಸಗಿದೆಯೇ ಹಾಗೂ ಅಂಥ ಕ್ರಮಕೈಗೊಳ್ಳಲು ನ್ಯಾಯೋದ್ದೇಶದಲ್ಲಿ ವಿಹಿತವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ನ್ಯಾಯಾಲಯವು ಮೊದಲ ನೋಟಕ್ಕೆ ಸಮ್ಮತವಾಗುವ ವಾದವನ್ನು ಮಾತ್ರವೇ ಪರಿಗಣಿಸದೆ, ಆರಂಭಿಸಬೇಕಾದ ಕ್ರಿಮಿನಲ್ ವ್ಯವಹರಣೆಯನ್ನು ಅನುಮತಿಸಲು ಇದು ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿದೆಯೇ ಅಥವಾ ಅದಕ್ಕೆ ವಿರುದ್ಧವಾಗಿದೆಯೇ ಎಂಬುದನ್ನು ಗಮನಿಸಿಕೊಳ್ಳಬೇಕಾಗಿರುತ್ತದೆ.

17. ಛಾಜು ರಾಂ ವಿರುದ್ಧ ರಾಧೇ ಶ್ಯಾಮ್ (1971) 1 ಎಸ್‌ಸಿಸಿ 774 ಪ್ರಕರಣದಲ್ಲಿ 779 ನೇ ಪುಟದಲ್ಲಿನ ಈ ನ್ಯಾಯಾಲಯವು, 195 ನೇ ಪ್ರಕರಣದಲ್ಲಿನ ವ್ಯವಹರಣೆಯನ್ನು ಅದೂ ಕೇವಲ ಉದ್ದೇಶಪೂರ್ವಕವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿದೆಯೆಂದು ಕಂಡು ಬಂದಲ್ಲಿ ಮಾತ್ರ ನ್ಯಾಯಾಲಯದ ಮಂಜೂರಾತಿ ಮೂಲಕ ಮಾತ್ರವೇ ಆರಂಭಿಸಬಹುದೆಂದೂ ಅಭಿಪ್ರಾಯಪಟ್ಟಿರುತ್ತದೆ.

ಇದನ್ನು ಈ ಮುಂದಿನಂತೆ ಒತ್ತಿ ಹೇಳಲಾಗಿರುತ್ತದೆ:

" 7. ಸುಳ್ಳು ಸಾಕ್ಷ್ಯ ಲುಲ್ ನೀಡಿಕೆ ಉದ್ದೇಶಪೂರ್ವಕ ಹಾಗೂ ಪ್ರಜ್ಞಾಪೂರ್ವಕವೆಂದು ಕಂಡುಬಂದಂಥ ಹಾಗೂ ಅಪರಾಧ ನಿರ್ಣಯವು ರಕವಾಗಿ ಸಾಧ್ಯತೆ ಅಥ ವ

3. ಸ ಂ ಭವನೀಯತೆಯಿರುವಂಥ ಪ್ರಕರಣಗಳಲ್ಲಿ ಮಾತ್ರ ನ್ಯಾಯಾಲಯಗಳು ಸುಳ್ಳು ಸಾಕ್ಷ್ಯ ಎ ನೀಡುವುದಕ್ಕೆ ಸಂಬಂಧಿಸಿದಂತೆ, ಪ್ರಾಸಿಕ್ಯೂಷನ್‌ಅನ್ನು ಮಂಜೂರು ಮಾಡಬೇಕಾಗಿರುತ್ತದೆ. ಸುಳ್ಳು ಸಾಕ್ಷ್ಯ ಎಂ ನೀಡುವುದು ಹಾಗೂ ಸುಳ್ಳು ಅಫಿಡಾವಿಟ್ಟುಗಳನ್ನು ಸಲ್ಲಿಸುವುದು ಅತ್ಯಂತ ಕೆಡುಕಿನದಾಗಿರುತ್ತದೆಂಬುದರಲ್ಲಿ ಯಾವುದೇ ಸಂದೇಹವಿರುವುದಿಲ್ಲ. ಇದನ್ನು ಯುಕ್ತವಾದ ಸುರಕ್ಷಾ ಕ್ರಮ ಹಾಗೂ ಜಾಗರೂಕ ಕ್ರಮಗಳಿಲ್ಲದೆ ಸುಳ್ಳು ಸಾಕ್ಷ್ಯ ಎ ನೀಡುವುದಕ್ಕೆ ಸ ಂ ಬ ಂ ಧಿಸಿದಂತೆ ಪ್ರಾಸಿಕ್ಯೂಷನ್ ಆರ ಂ ಭಿ ಸುವುದನ್ನು ಪರಿಣಾಮಕಾರಿಯಾಗಿ ನಿರ್ಬ ಂ ಧಿ ಸ ಬೇಕಾಗಿರುತ್ತದೆ. ನಿರ್ಣಾಯಕವಲ್ಲದ ಹಾಗೂ ಸಂದೇಹಾಸ್ಪದ ವಿಚಾರಗಳು ಈ ಸದರಿ ಉದ್ದೇಶಗಳನ್ನು

ವಿಫಲಗೊಳಿಸುತ್ತವೆ. ತಪ್ಪಿತಸ್ಥನನ್ನು ದಂಡಿಸಲು ನ್ಯಾಯ ನೀಡಿಕೆಯ ಹಿತಾಸಕ್ತಿಯಲ್ಲಿ ವಿಹಿತವೆಂದು ಪರಿಗಣಿಸಿದಾಗ ಮಾತ್ರ ಪ್ರಾಸಿಕ್ಯೂಷನ್‌ಅನ್ನು ಆದೇಶಿಸಬೇಕೇ ಹೊರತು, ಕೇವಲ ಮುಗ್ಧ ಅಥವಾ ಅತಾರ್ಕಿಕವಾಗಿರಬಹುದಾದಂಥ ಹೇಳಿಕೆಯಲ್ಲಿ ಸ್ವಲ್ಪಮಟ್ಟಿನ ಅಸ್ಪಷ್ಟತೆಯ ಕಾರಣಕ್ಕಾಗಿ ಪ್ರಾಸಿಕ್ಯೂಷನ್ ನಡೆಸುವಂತಿಲ್ಲ. ವಿಷಯವನ್ನು ಕುರಿತ ಉದ್ದೇಶಪೂರ್ವಕ ಸುಳ್ಳಿನ ಬಗೆಗೆ ಮೇಲ್ನೋಟಕ್ಕೆ ಸಾಬೀತುಪಡಿಸುವ ವಾದವನ್ನು ಮಂಡಿಸಿ, ಆರೋಪಕ್ಕೆ ಸಂಬಂಧಿಸಿದಂತೆ ಯುಕ್ತ ಸಾಕ್ಷ್ಯವನ್ನು ಮಂಡಿಸಿ, ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಡಬೇಕು.

18. ಸಂತೋಖ್ ಸಿಂಗ್-ವಿರುದ್ಧ-ಇಝೂರ್ ಹುಸೇನ್ ಹಾಗೂ ಮತ್ತೊಬ್ಬರು (1973) 2 ಎಸ್‌ಸಿಸಿ 406, ಪ್ರಕರಣದಲ್ಲಿ, ಈ ನ್ಯಾಯಾಲಯವು, ಪ್ರತಿಯೊಂದು ಸತ್ಯವಲ್ಲದ ಅಥವಾ ಸತ್ಯವನ್ನು ಮರೆಮಾಚುವ ಹೇಳಿಕೆಗೂ ಪ್ರಾಸಿಕ್ಯೂಷನ್ ಅನ್ನು ಆದೇಶಿಸಲು ನ್ಯಾಯಾಲಯದ ಮೇಲೆ ಹೊಣೆಗಾರಿಕೆಯನ್ನು ಹೇರುವಂತಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ನ್ಯಾಯಾಲಯವು, ವಿಹಿತತೆಯ ಪ್ರಶ್ನೆಯನ್ನು ನಿರ್ಧರಿಸುವಾಗ ಎಲ್ಲಾ ಸೂಕ್ತ ಸಂದರ್ಭಗಳ ಹಿನ್ನಲೆಯಲ್ಲಿ ನ್ಯಾಯಿಕ ವಿವೇಚನೆಯನ್ನು ಚಲಾಯಿಸಬೇಕಾಗುತ್ತದೆ. ನ್ಯಾಯಾಲಯವು, ನ್ಯಾಯನಿರ್ವಹಣೆಯ ಉನ್ನತ ಹಿತಾಸಕ್ತಿಯನ್ನು ಪೋಷಿಸಲು ಪ್ರಾಸಿಕ್ಯೂಷನ್‌ನನ್ನು ಆದೇಶಿಸಬೇಕೇ ಹೊರತು, ವೈಯಕ್ತಿಕ ದ್ವೇಷ ಅಥವಾ ಸೇಡಿನ ಭಾವನೆಗಳನ್ನು ಪೋಷಿಸಲಾಗಲೀ ಅಥವ ಖಾಸಗಿ ವ್ಯಕ್ತಿಗಳಿಗೆ ಸೇವೆ ಸಲ್ಲಿಸಲಾಗಲಿ ಅಲ್ಲ. ಅಂಥ ಅಪರಾಧಗಳಿಗೆ ಸಂಬಂಧಿಸಿದ ಪ್ರಾಸಿಕ್ಯೂಷನ್‌ಗಳನ್ನು ಪದೇ ಪದೇ ಜರುಗಿಸುತ್ತಿದ್ದರೆ, ಇದರ ಸದರಿ ಉದ್ದೇಶವು ತೊಂದರೆಗೊಳಗಾಗುತ್ತದೆ. ಅಪರಾಧ ನಿರ್ಣಯವು ಹೆಚ್ಚು ಸಂಭಾವ್ಯವಿರುವಂಥ ಉದ್ದೇಶ ಪೂರ್ವಕವಾಗಿ ಚ ಸುಳ್ಳು ಸಾಕ್ಷ್ಯ ಎ ಹೇಳಿರುವುದು ಸ್ಪಷ್ಟವಾಗಿರುವ ಪ್ರಕರಣಗಳಲ್ಲಿ ಮಾತ್ರ ನ್ಯಾಯಾಲಯವು ಪ್ರಾಸಿಕ್ಯೂಷನ್‌ಅನ್ನು ನಿರ್ದೇಶಿಸಬೇಕಾಗಿರುತ್ತದೆ.

19. ಎಂ.ಎಸ್. ಅಣ್ಣಾವತ್ (ಹಿಂದೆ ಹೇಳಿದ) ಪ್ರಕರಣಗಳಲ್ಲಿ ಈ ನ್ಯಾಯಾಲಯವು, ಖಾಸಗಿ ದೂರುಗಳನ್ನು ಭಾರತ ದಂಡ ಸಂಹಿತೆಯ 193 ನೇ ಪ್ರಕರಣದ ಅಡಿಯಲ್ಲಿ ಎಸಗಲಾಗಿದೆಯೆಂದು ಹೇಳುವ ಅಪರಾಧಗಳಿಗೆ ಸಂಬಂಧಿಸಿದಂತೆ ನಿರುಪಾಧಿಕವಾಗಿ ನಿಷೇಧಿಸಲಾಗಿರುತ್ತದೆ ಹಾಗೂ ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ಪ್ರಕ್ರಿಯೆಯು ಆಜ್ಞಾಪಕವಾಗಿರುತ್ತದೆ. ಇದನ್ನು ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

" 5. ಭಾರತ ದಂಡ ಸಂಹಿತೆಯ XI ನೇ ಅಧ್ಯಾಯವು " ಸುಳು ಸಾಕ್ಷ್ಯ ಎಲಾ ಹಾಗೂ ಲೋಕ ನ್ಯಾಯದ ವಿರುದ್ಧದ ಅಪರಾಧಗಳನ್ನು ಕುರಿತು ವ್ಯವಹರಿಸುತ್ತದೆ ಹಾಗೂ ಅದರಲ್ಲಿನ 193 ನೇ ಪ್ರಕರಣವು ನ್ಯಾಯಿಕ ವ್ಯವಹರಣೆಗಳಲ್ಲಿ ಸುಳ್ಳು ಸಾಕ್ಷ್ಯವನ್ನು ನೀಡುವ ಅಥವಾ ಸೃಷ್ಟನೆ ಮಾಡುವ ದಂಡನೆಗೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಿರುತ್ತದೆ. ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಯ 195 ನೇ ಪ್ರಕರಣವು, ಲೋಕ ನೌಕರರ ಕಾನೂನುಬದ್ಧ ಪ್ರಾಧಿಕಾರದ ಅವಹೇಳನದ ಅಪರಾಧಕ್ಕೆ ಅಥವಾ ಭಾರತ ದಂಡ ಸಂಹಿತೆಯ 193 ನೇ ಪ್ರಕರಣದ ಅಡಿಯಲ್ಲಿ ಸುಳ್ಳು ಸಾಕ್ಷ್ಯ ನೀಡುವಂಥ ಲೋಕ ನ್ಯಾಯದ ವಿರುದ್ಧದ ಅಪರಾಧಕ್ಕೆ ನ್ಯಾಯಾಲಯಗಳಲ್ಲಿ ವಾಸ್ತವವಾಗಿ ಬಳಸಿದ ದಸ್ತಾವೇಜುಗಳಿಗೆ ಸಂಬಂಧಿಸಿದ ಅಪರಾಧಗಳಿಗೆ ಕಾರಣವಾಗುವಂಥ ಕೃತ್ಯಗಳನ್ನು ಖಾಸಗಿ ಪ್ರಾಸಿಕ್ಯೂಷನ್‌ಗಳು ನಿರುಪಾಧಿಕವಾಗಿ ನಿಷೇಧಿಸಿದ್ದು ಹಾಗೂ ಎಸಗಿರುವ ಇಂಥ ಅಪರಾಧಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಮಾತ್ರವೇ ವ್ಯವಹರಣೆಗಳನ್ನು ಆರಂಭಿಸಬೇಕೆಂಬ ಉಪಬಂಧವನ್ನು ಕಲ್ಪಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ಉಪಬಂಧಗಳು ಆಜ್ಞಾಪಕವಾಗಿದ್ದು, ಆ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದಂಥ ಲಿಖಿತಗಳಲ್ಲಿನ ದೂರನ್ನು ಹೊರತುಪಡಿಸಿ ಅದರಲ್ಲಿ ನಮೂದಿಸಿದ ಯಾವುದೇ ಅಪರಾಧಗಳನ್ನು ಸಂಜ್ಞೇಯತೆಗೆ ತೆಗೆದುಕೊಳ್ಳಲು ಯಾವುದೇ ನ್ಯಾಯಾಲಯವು ಅಧಿ ಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ಪ್ರತಿಯೊಂದು ಸತ್ಯವಲ್ಲದ ಅಥವಾ ಸತ್ಯವನ್ನು ಮರೆಮಾಚುವ ಹೇಳಿಕೆಗೂ ಪ್ರಾಸಿಕ್ಯೂಷನ್‌ನ ಆದೇಶ ಮಾಡಿ ನ್ಯಾಯಾಲಯವನ್ನು ಅಗತ್ಯಪಡಿಸಲಾಗುವುದಿಲ್ಲ. ಆದರೆ ನ್ಯಾಯನಿರ್ವಹಣೆಯ ಹೆಚ್ಚಿನ ಹಿತಾಸಕ್ತಿಯ ದೃಷ್ಟಿಯಿಂದ ಮಾತ್ರ

ಪ್ರಾಸಿಕ್ಯೂಷನ್‌ನ ಆದೇಶಕ್ಕೆ ನ್ಯಾಯಿಕ ವಿವೇಚನೆಯನ್ನು ಚಲಾಯಿಸಬೇಕೆಂಬುದು ಇತ್ಯರ್ಥಗೊಂಡ ಕಾನೂನಾಗಿರುತ್ತದೆ.

6. ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣವು, ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ಅಡಿಯಲ್ಲಿ ಫಿರ್ಯಾದನ್ನು ಹೇಗೆ ಸಲ್ಲಿಸಬೇಕೆಂಬುದನ್ನು ಗೊತ್ತುಪಡಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ಅಡಿಯಲ್ಲಿ, ಆಪಾದಿತನ ಪ್ರಾಸಿಕ್ಯೂಷನ್‌ಗಾಗಿ ದೂರನ್ನು ಸಲ್ಲಿಸಿದ ಅಪರಾಧವನ್ನು ಎಸಗುವ ಮೊದಲು ನ್ಯಾಯಾಲಯವು ಮುಕ್ತವಾಗಿರುವಾಗ, ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣವು, ಫಿರ್ಯಾದನ್ನು ಹೇಗೆ ಸಲ್ಲಿಸಬೇಕೆಂಬ ಪ್ರಕ್ರಿಯೆಯನ್ನು ಗೊತ್ತುಪಡಿಸುತ್ತದೆ. ದಂಡ ಪ್ರಕ್ರಿಯಾ ಸಂಹಿತೆಯ 195 ನೇ ಪ್ರಕರಣದ ಅಡಿಯಲ್ಲಿನ ಉಪಬಂಧಗಳು ಆಜ್ಞಾಪಕವಾಗಿದ್ದು, ಯಾವುದೇ ನ್ಯಾಯಾಲಯವು ಅದರಲ್ಲಿ ಉಲ್ಲೇಖಿಸಿದ ಅಪರಾಧಗಳನ್ನು ಸಂಜ್ಞೆಯಕ್ಕೆ ತೆಗೆದುಕೊಳ್ಳುವಂತಿಲ್ಲ. ಅಂಥ ಅಪರಾಧದ ಸಂಬಂಧದಲ್ಲಿ, ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಅಡಿಯಲ್ಲಿ ಮುಂದುವರೆಯಲು ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣದ ಉಪಬಂಧಗಳ ಹೊರಗಿನ ದೂರನ್ನು ಇದರ ಒಳಗೆ ಅಂತರ್ಗತವಾಗಿರುವ ಅಧಿಕಾರ ವ್ಯಾಪ್ತಿಯಡಿಯಲ್ಲಿ ಯಾವುದೇ ಸಿವಿಲ್, ರೆವಿನ್ಯೂ ಅಥವಾ ಕ್ರಿಮಿನಲ್ ನ್ಯಾಯಾಲಯಗಳ ಮೂಲಕ ಸಲ್ಲಿಸಲಾಗುವುದಿಲ್ಲ ”.

(ನನ್ನಿಂದ ಒತ್ತು ನೀಡಲಾಗಿದೆ)

20. ಈಗಾಗಲೇ ನಮೂದಿಸಲಾದಂತೆ, ದಂಡ ಪ್ರಕ್ರಿಯಾ ಸಂಹಿತೆಯ 195 (1) (ಬಿ) ಪ್ರಕರಣದ ಅಡಿಯಲ್ಲಿ ಅಂದರೆ 195 (1) (ಬಿ) (i) ನೇ ಹಾಗೂ 195 (1) (ಬಿ) (ii) ನೇ ಉಪ-ಪ್ರಕರಣಗಳ ಅಡಿಯಲ್ಲಿನ ಖಂಡಗಳ ಪ್ರತ್ಯೇಕ ಅಪರಾಧಗಳಿಗೆ ಅವಕಾಶ ಕಲ್ಪಿಸಿಕೊಡುತ್ತವೆ. ದಂಡ ಪ್ರಕ್ರಿಯಾ ಸಂಹಿತೆಯ 340 ನೇ ಪ್ರಕರಣವು 195 (1) (ಬಿ) ಪ್ರಕರಣದ ಅಡಿಯಲ್ಲಿ ಎಸಗಲಾದ ಅಪರಾಧಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಪ್ರಕರಣವಾಗಿದ್ದು, ಇದು ದಂಡ ಪ್ರಕ್ರಿಯಾ ಸಂಹಿತೆಯ 195 (1) (ಬಿ) ಪ್ರಕರಣದ (i) ಹಾಗೂ (ii) ನೇ ಖಂಡಗಳಿಗೆ ಭಿನ್ನ ಹಾಗೂ ಅನನ್ಯ ಅನ್ವಯಗಳಾಗಿರುತ್ತದೆ.

21. ಅಪೀಲುದಾರರ ಪರ ಮಾನ್ಯ ವಕೀಲರು ಉದಾಹರಿಸಿದ ಸಚ್ಚಿದಾನಂದ ಸಿಂಗ್ (ಈ ಹಿಂದೆ ಹೇಳಿದ) ಪ್ರಕರಣದಲ್ಲಿ, ಈ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯು 195 (1) (ಬಿ) (i) ಪ್ರಕರಣದ ಅಡಿಯಲ್ಲಿನ ಹೇಳಲಾದ ನಿಷೇಧವು, ನ್ಯಾಯಾಲಯದಲ್ಲಿ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಮೊದಲು ದಸ್ತಾವೇಜಿನ ಸುಳ್ಳು ಸೃಷ್ಟನೆ ಮಾಡಿರುವ ಪ್ರಕರಣಕ್ಕೆ ಅನ್ವಯವಾಗುತ್ತದೆಯೇ ಎಂಬ ಪ್ರಶ್ನೆಯನ್ನು ಪರಿಗಣಿಸಬೇಕಾಗಿರುತ್ತದೆ. ಅದನ್ನು ಈ ಮುಂದಿನಂತೆ ಅಭಿಪ್ರಾಯಪಡಲಾಗಿರುತ್ತದೆ:

“ 6. ಈ ಖಂಡದ ಓದಿನಿಂದ, ಅಲ್ಲಿ ನಮೂದಿಸಲಾದ ನಿಷೇಧದ ಕಾರ್ಯಾರಂಭಕ್ಕೆ ಸಂಬಂಧಿಸಿದ ಎರಡು ಮುಖ್ಯವಾದ ಪ್ರಮೇಯಗಳನ್ನು ಬಹಿರಂಗಪಡಿಸುತ್ತವೆ. ಮೊದಲನೆಯದು, ಅಪರಾಧವನ್ನು (ಇದು ಭಾರತ ದಂಡ ಸಂಹಿತೆಯಡಿಯಲ್ಲಿನ 463 ನೇ ಪ್ರಕರಣದ ಅಡಿಯಲ್ಲಿ ವಿವರಿಸಲಾದ ಅಪರಾಧ ಇಲ್ಲವೆ 471, 475, 476 ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಯಾವುದೇ ಇತರ ಅಪರಾಧಗಳು) ಎಸಗಲಾಗಿದೆಯೆ 0 ಬ ಆಪಾದನೆಯಾಗಿರಬೇಕು. ಎರಡನೆಯದು ಅಂಥ ಅಪರಾಧವನ್ನು ಯಾವುದೇ ನ್ಯಾಯಾಲಯದಲ್ಲಿನ ವ್ಯವಹರಣೆಯಲ್ಲಿ ಸಾಕ್ಷ್ಯವನ್ನು ಹಾಜರುಪಡಿಸಿದ ಅಥವಾ ನೀಡಿದ ದಸ್ತಾವೇಜಿನ ಸಂಬಂಧದಲ್ಲಿ ಎಸಗಲಾಗಿದೆಯೆಂಬುದಾಗಿರುತ್ತದೆ. ನಕಲು ದಸ್ತಾವೇಜಿನ ಸೃಷ್ಟನೆಯನ್ನು ದಸ್ತಾವೇಜು ನ್ಯಾಯಾಲಯದ ಅಭಿರಕ್ಷೆಯಲ್ಲಿರುವಾಗ ಎಸಗಲಾಗಿದ್ದಲ್ಲಿ, ತರುವಾಯ ಪ್ರಾಸಿಕ್ಯೂಷನ್ ಅನ್ನು ನ್ಯಾಯಾಲಯವು ನೀಡಿದ ದೂರಿನೊಂದಿಗೆ ಮಾತ್ರ ನಡೆಸಲಾಗುವುದೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲ. ಅಲ್ಲದೆ, ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲದಿರುವಂಥ ದಸ್ತಾವೇಜುಗಳಲ್ಲಿ ನಕಲು ದಸ್ತಾವೇಜನ್ನು ಸೃಷ್ಟಿಸದಿರುವಲ್ಲಿ, ಪ್ರಾಸಿಕ್ಯೂಷನ್‌ಅನ್ನು ಯಾರೇ ವ್ಯಕ್ತಿಯ ಸಂದರ್ಭದಲ್ಲಿ ನಡೆಸಲಾಗುವುದೆಂಬುದರಲ್ಲೂ

ಯಾವುದೇ ವಿವಾದವಿರುವುದಿಲ್ಲ. ಹಾಗಿದ್ದಲ್ಲಿ, ನ್ಯಾಯಾಲಯದಲ್ಲಿ ಇದರ ಹಾಜರುಪಡಿಸುವಿಕೆಯು ಎಲ್ಲಾ ವ್ಯತ್ಯಾಸಗಳನ್ನು ಮಾಡುತ್ತದೆಯೆ?

23. ಮೇಲಿನ ಚರ್ಚೆಯಿಂದ, ಸಂಹಿತೆಯ 195 (1) (ಬಿ) (ii) ನೇ ಪ್ರಕರಣದಲ್ಲಿರುವ ನಿಷೇಧವು, ನ್ಯಾಯಾಲಯದಲ್ಲಿ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಮೊದಲು ದಸ್ತಾವೇಜಿನ ಸುಳ್ಳು ಸೃಷ್ಟನೆಯನ್ನು ಎಸಗಲಾಗಿರುವಲ್ಲಿನ ಸ ಂ ದರ್ಭಕ್ಕೆ ಅನ್ವಯವಾಗುವುದಿಲ್ಲವೆಂಬುದು ತಿಳಿದುಬರುತ್ತದೆ. ತದನುಸಾರವಾಗಿ ನಾನು ಈ ಅಪೀಲನ್ನು ವಜಾ ಮಾಡಿರುತ್ತೇನೆ ".

22. ಸಚ್ಚಿದಾನಂದ್ ಸಿಂಗ್ (ಈ ಹಿಂದೆ ಹೇಳಿದ) ಪ್ರಕರಣದಲ್ಲಿ, ಈ ನ್ಯಾಯಾಲಯವು, ದಂಡ ಪ್ರಕ್ರಿಯಾ ಸಂಹಿತೆಯ 195 (1) (ಬಿ) (ii) ಪ್ರಕರಣದೊಂದಿಗೆ ವ್ಯವಹರಿಸಲಾಗಿದ್ದು ಪ್ರಕರಣದ ಈ ಹಿಂದೆ ಹೇಳಿದ ಖಂಡವು ಒಳಗೊಳ್ಳುವಂಥ ವರ್ಗಕ್ಕೆ ಪ್ರಸ್ತುತ ಪ್ರಕರಣಕ್ಕೆ ಹೊಂದುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ 195 (1) (ಬಿ) (i) ಪ್ರಕರಣದ ಅಡಿಯಲ್ಲಿ ಬರುವಂಥ ಅಪರಾಧಗಳ ಪ್ರವರ್ಗವನ್ನು, ಸದರಿ ದಸ್ತಾವೇಜುಗಳ ಅಪರಾಧವನ್ನು ನ್ಯಾಯಾಲಯದ ಹೊರಗೆ ಅಥವಾ ಅದು ನ್ಯಾಯಾಲಯದ ಅಭಿರಕ್ಷೆಯಲ್ಲಿರುವಾಗ ಎಸಗಲಾಗಿದೆಯೇ ಎಂಬ ವಿವಾದವು ಉದ್ಭವಿಸಿರುವಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 195 (1) (ಬಿ) (ii) ಪ್ರಕರಣದ ಅಡಿಯಲ್ಲಿನ ಅಂಥ ಅಪರಾಧಗಳಿಂದ ಭಿನ್ನವಾಗಿರುವಂಥ ಲೋಕ ನ್ಯಾಯಕ್ಕೆ ವಿರುದ್ಧವಾಗಿ ಸುಳ್ಳು ಸಾಕ್ಷ್ಯ ಎಣಿ ನೀಡುವ ಅಪರಾಧಕ್ಕಾಗಿ ಹಾಗೂ ಅಪರಾಧಗಳಿಗಾಗಿ ಉಲ್ಲೇಖಿಸಲಾಗಿದೆ. ಹಾಗಾಗಿ, ಈ ತೀರ್ಪು ಪ್ರಸ್ತುತ ಮೊಕದ್ದಮೆಯ ವಾಸ್ತವಾಂಶಗಳಿಗೆ ಅನ್ವಯವಾಗುವುದಿಲ್ಲ.

23. ಪ್ರಸ್ತುತ ಪ್ರಕರಣವು ಭಾರತ ದಂಡ ಸಂಹಿತೆಯ 193 ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗುವ ಅಪರಾಧದಂತೆ ದಂಡ ಪ್ರಕ್ರಿಯಾ ಸಂಹಿತೆಯ 195 (1) (ಬಿ) (i) ನೇ ಪ್ರಕರಣದ ಅಡಿಯಲ್ಲಿ ಬರುವ ಪ್ರಕರಣಗಳ ಪ್ರವರ್ಗಗಳೊಳಗೆ ಅಂದರೆ ಈ ಎರಡೂ ಪ್ರಕರಣಗಳೊಳಗೆ ಬರುತ್ತದೆ. ಆದ್ದರಿಂದ, ಮ್ಯಾಜಿಸ್ಟ್ರೇಟರು, ಖಾಸಗಿ ಫಿರ್ಯಾದಿನ ಆಧಾರದ ಮೇಲೆ ಅಪರಾಧವನ್ನು ಸಂಸ್ಥೆಯಕ್ಕೆ ತೆಗೆದುಕೊಳ್ಳುವಲ್ಲಿ ದೋಷವನ್ನು ಎಸಗಿರು . ನಮ್ಮ ದೃಷ್ಟಿಯಲ್ಲಿ ಉಚ್ಚ ನ್ಯಾಯಾಲಯವು, ಮ್ಯಾಜಿಸ್ಟ್ರೇಟರ ಆದೇಶವನ್ನು ರದ್ದುಪಡಿಸಿರುವುದು ಸರಿಯಾದುದಾಗಿರುತ್ತದೆ. ಆದಾಗ್ಯೂ, ಮೊಕದ್ದಮೆಯ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು, ನಾವು ಉಚ್ಚ ನ್ಯಾಯಾಲಯವು ವಿಧಿಸಿರುವ ಚ ವೆಚ್ಚಗಳನ್ನು ರದ್ದುಪಡಿಸುವುದು ಯುಕ್ತವಾದುದೆಂದು ಭಾವಿಸುತ್ತೇವೆ.

24. ತದನುಸಾರವಾಗಿ ಈ ಅಪೀಲನ್ನು ವಿಲೇ ಮಾಡಲಾಗಿದೆ.